ದಿನಾಂಕಃ 26-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**-: ಮುಖ್ಯ ವಿಚಾರಣೆಃ ಶ್ರೀ ಕೆ ಹೆಚ್ ಎಂ ವಕೀಲರಿಂದ ವಾದಿಯ ಪರವಾಗಿ:-**

ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದು. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿರುತ್ತದೆ ಮತ್ತು ಸತ್ಯವಾಗಿರುತ್ತದೆ. ಅದನ್ನು ಓದಿ ತಿಳಿದುಕೊಂಡು ಅದಕ್ಕೆ ನನ್ನ ಸಹಿ ಮಾಡಿರುತ್ತೇನೆ.

2. ನಾನು ನನ್ನ ಆಧಾರ್ ಕಾರ್ಡ್ ಮತ್ತು ಅದರ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಮೂಲ ಆಧಾರ್ ಕಾರ್ಡ್ ತನಗೆ ಬೇರೆ ಕಾರ್ಯಗಳಿಗೆ ಬೇಕೆಂದು ಹೇಳಿದ್ದರಿಂದ ಮೂಲ ಆಧಾರ್ ಕಾರ್ಡ್ ಮತ್ತು ಅದರ ಪ್ರತಿಯಲ್ಲಿರುವ ವಿವರಗಳನ್ನು ತಾಳೆ ಮಾಡಿ ನೋಡಿ ಸರಿಯಾಗಿರುವುದು ಕಂಡು ಬಂದ ಮೇರೆಗೆ ಅದರ ಪ್ರತಿಯನ್ನು ನಿಪಿ.10 ಎಂದು ಗುರುತಿಸಿ ಮೂಲ ಆಧಾರ್ ಕಾರ್ಡನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು. ನನ್ನ ತಂದೆ ಎ.ಕೆ.ಭಾಸ್ಕರಾಚಾರ್ ರವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ನನ್ನ ತಂದೆ ವ್ಯವಸಾಯ ಮಾಡಿಕೊಂಡಿದ್ದರು ಮತ್ತು ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸ್ಟ್ಯಾಂಪ್ ವೆಂಡರ್ ಆಗಿ ಕೆಲಸ ಮಾಡಿಕೊಂಡಿದ್ದರು. ಸಾಕ್ಷಿಯು ಈಗಾಗಲೇ ನಿಪಿ.9 ಎಂದು ಗುರುತಿಸಲ್ಪಟ್ಟಿರುವ ವಿಲ್ ಯಾನೆ ಮರಣ ಶಾಸನ ಪತ್ರವನ್ನು ತೋರಿಸಲಾಗಿ ಅದರಲ್ಲಿ ಬಿಕ್ಕಲಂದಾರರಾಗಿ ನನ್ನ ತಂದೆ ಸಹಿ ಮಾಡಿದ್ದಾರೆಂದು ನುಡಿದು ಅದರಲ್ಲಿರುವ ಸಹಿಯನ್ನು ನೋಡಿ ಸದರಿ ವಿಲ್ಲಿನ ಎರಡನೇ ಪುಟದ ಕೊನೆಯಲ್ಲಿ ಬಿಕ್ಕಲಂದಾರ ಎಂದು ಬರೆದಿರುವ ಸ್ಥಳದಲ್ಲಿ ಕಂಡು ಬರುವ ಸಹಿ ನನ್ನ ತಂದೆಯದ್ದು ಎಂದು

ನುಡಿದಿರುತ್ತಾರೆ. ಸದರಿ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

**2** ಮತ್ತು **3** ನೇ ಪ್ರತಿವಾದಿಗಳ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ**.** **1** ನೇ ಪ್ರತಿವಾದಿ ಮತ್ತು ಆತನ ಪರ ವಕೀಲರು ಗೈರು ಹಾಜರಿರುವ ಕಾರಣ ಅವರ ಪರವಾಗಿ ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು**.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ